೩೪

# ಮಾನಸಿಕ ದೂರ
# (Psychical distance)

ಮಾನಸಿಕ ದೂರ ಸಿದ್ಧಾಂತವು ಪಾಶ್ಚಾತ್ಯ ಕಾವ್ಯಮೀಮಾಂಸಕರ ಮತ್ತು ಸೌಂದರ್ಯ ಮೀಮಾಂಸಕರ ಗಮನ ಸೆಳೆದದ್ದು ಹತ್ತೊಂಬತ್ತನೆಯ ಶತಮಾನದ ಸಂದರ್ಭದಲ್ಲಿ. ಕ್ರಿ.ಶ. ೧೯೧೨ ರಲ್ಲಿ ಪ್ರಕಟವಾದ ಎಡ್ವರ್ಡ್ ಬುಲ್ಲೋನ ಲೇಖನ "Psychical distance as a factor in Art and an Aesthetic principle" ಎಂಬುದು ಮಾನಸಿಕ ದೂರ ತತ್ತ್ವದತ್ತ ಚಿಂತಕರ ಯೋಚನೆಗಳು ಹರಿಯುವಂತೆ ಮಾಡಿತು. ಈ ಲೇಖನ ಮೊಟ್ಟಮೊದಲಿಗೆ "The British journal of psychology" (P.೮೭-೧೨೮)ಯಲ್ಲಿ ಪ್ರಕಾಶಿತಗೊಂಡಿತು. ಮುಂದೆ ಕ್ರಿ.ಶ.೧೯೫೭ ರ ಸುಮಾರಿಗೆ ಎಡ್ವರ್ಡ್ ಬುಲ್ಲೋನಿಂದ ರಚಿತವಾದ "Aesthetics: Lectures and Eassays" ಎಂಬ ಗ್ರಂಥವು ಪ್ರಕಟಿತವಾಯಿತು. ಇದರಲ್ಲಿ ಮೇಲಿನ ಲೇಖನವು ಒಳಗೊಂಡಿರುವುದನ್ನು ಕಾಣಬಹುದು.

ಸಂಸ್ಕೃತಕಾವ್ಯ ಮೀಮಾಂಸೆಯಲ್ಲಿ ಲಾಕ್ಷಣಿಕರು ರಸತತ್ತ್ವದ ಸಂದರ್ಭದಲ್ಲಿ "ಸಾಧರಣೀಕರಣ" ಎಂಬ ತತ್ತ್ವವನ್ನು ಕುರಿತು ಆಲೋಚನೆ ಮಾಡಿದ್ದುಂಟು. ಭಟ್ಟನಾಯಕನ ಆಲೋಚನೆಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. "ಸಾಧರಣೀಕರಣ"ಕ್ಕೂ ಮತ್ತು "ಮಾನಸಿಕ ದೂರ" ತತ್ತ್ವಕ್ಕೂ ಸಂಬಂಧ ಇರುವ ಬಗೆಗೆ ವಿದ್ವಾಂಸರು ಚರ್ಚೆ ಮಾಡಿದ್ದಾರೆ. ಸಾಧರಣೀಕರಣವು ಮನಸ್ಸನ್ನು ರಸಾನುಭವಕ್ಕೆ ಸಿದ್ಧಗೊಳಿಸುವ ಒಂದು ಶಕ್ತಿಯೆಂದು ಹೇಳಲಾಗಿದೆ. ಹೀಗೆಂದ ಮಾತ್ರಕ್ಕೆ ಅದು ಹೊರಗಿನ ಶಕ್ತಿಯಲ್ಲ. ಅದೊಂದು ತೆರನಾದ ಮನಸ್ಸಿನ ಸ್ಥಿತಿಯೇ ಆಗಿದೆ. ಸಹೃದಯ ಅಥವಾ ಕಲಾಸಕ್ತನ ಮನಸ್ಸು, ತನ್ನ ಎನೆಲ್ಲ ವೈಯಕ್ತಿಕವಾದ ಬಂಧನಗಳನ್ನು ನೀಗಿಸಿಕೊಂಡು "ಕಾವ್ಯ" ಅಥವಾ ಕಲೆಯ ರಸಾನುಭೂತಿ ಇಲ್ಲವೆ ಸೌಂದರ್ಯಾನುಭೂತಿ ಹೊಂದುವಂತಹ ಸ್ಥಿತಿಯು ಆದಾಗಿದೆ.

"ಮಾನಸಿಕ ದೂರ" ತತ್ತ್ವದ ಪ್ರತಿಪಾದಕನ ಸ್ಥಾನವು ಪಾಶ್ಚಾತ್ಯ ಕಾವ್ಯ ವಿಮರ್ಶಕ ಮತ್ತು ಚಿಂತಕ ಎಡ್ವರ್ಡ್ ಬುಲ್ಲೋನಿಗೆ ದಕ್ಕುತ್ತದೆ. ಕನ್ನಡದಲ್ಲಿ ಕಾವ್ಯಮೀಮಾಂಸೆಯ ವಿದ್ವಾಂಸರು ಅದನ್ನು ಮಾನಸಿಕ ಅಂತರ, ಸದೂರ, ರಸದೂರ ಮನೋದೂರ, ಅಲೌಕಿಕ ಅಂತರ-ಎಂಬ ಮುಂತಾದ ಸಮಾನ ಶಬ್ಧಗಳಿಂದ ಸೂಚಿಸಿದ್ದಾರೆ.

ಸಹೃದಯನಾದವನು ಒಂದು ಕಾವ್ಯವನ್ನು ಸರಿಯಾಗಿ ಗ್ರಹಿಸಿಕೊಂಡು ಅದರಿಂದ ರಸಾನುಭೂತಿ ಹೊಂದಬೇಕಾದರೆ, ಮೊದಲಿಗೆ ಅವನು ಅದರೊಂದಿಗೆ ಇರುವ ತನ್ನ



Scanned with CamScanner

ಸಂಬಂಧವೇನು? ಮತ್ತು ಅಂತರವೇನು? ಎಂಬ ಪ್ರಶ್ನೆಗಳ ಬಗೆಗೆ ಸ್ಪಷ್ಟವಾದ ತಿಳುವಳಿಕೆ ಉಳ್ಳವನಾಗಿರಬೇಕಾಗುತ್ತದೆ. ಈ ಮಾತು ಸೌಂದರ್ಯವನ್ನು ಅನುಭವಿಸುವ ಕಲಾಪ್ರೇಕ್ಷಕನಿಗೂ ಅನ್ವಯವಾಗುತ್ತದೆ.

ಮನುಷ್ಯನು ಮೂಲತಃ ಪ್ರಯೋಜನ ಮನಸ್ಸಿನ ಜೀವಿಯಾಗಿರುವುದರಿಂದ, ಅವನು ಎಲ್ಲವನ್ನೂ ವ್ಯವಹಾರ ದೃಷ್ಟಿಯಿಂದಲೇ ನೋಡುತ್ತಾನೆ. ವ್ಯವಹಾರದ ದೃಷ್ಟಿಯು ಕಲೆ ಅಥವಾ ಕಾವ್ಯವನ್ನು ನಿರ್ಮಿಸುವಾಗ ಕವಿ ಇಲ್ಲವೆ ಕಲಾವಿದನಿಗೆ ಇರಬಾರದು. ಅದನ್ನು ಅನುಭವಿಸುವ ಸಹೃದಯ ಅಥವಾ ಕಲಾಸಕ್ತನಿಗೂ ಇರಬಾರದು. ವ್ಯವಹಾರಿಕ ದೃಷ್ಟಿಗೆ ಕಾವ್ಯವು ರಸಪೂರ್ಣ ಎನಿಸಲಾರದು. ಪ್ರಯೋಜನ ದೃಷ್ಟಿಗೆ ಕಲೆಯು ಸೌಂದರ್ಯಯುತವಾಗಿ ಕಾಣಲಾರದು. ಎಡ್ವರ್ಡ್ ಬುಲ್ಲೋ ಈ ಸತ್ಯವನ್ನು ಅರುಹುವುದಕ್ಕಾಗಿಯೇ "ಮಾನಸಿಕ ದೂರ" ತತ್ವವನ್ನು ಪ್ರಸ್ತಾಪಿಸುತ್ತಾನೆ. ಅವನು ಮುಂದುವರೆದು "ಮಾನಸಿಕ ಅಂತರ" ಇಲ್ಲದೆ ಸೌಂದರ್ಯಾನುಭವವೇ ಸಾಧ್ಯವಿಲ್ಲ. ಏಕೆಂದರೆ ಎಲ್ಲಿ ಲೌಕಿಕ ಪ್ರತಿಕ್ರಿಯೆಯಿಂದ ವಿಮುಕ್ತವಾಗಿ ನೋಡಲು ಸಾಧ್ಯವೋ ಅಲ್ಲಿ ಮಾತ್ರ ಸೌಂದರ್ಯಾನುಭವ ಸಾಧ್ಯವಾಗುತ್ತದೆ. ಮಾನಸಿಕ ದೂರವೊಂದೇ ಇದಕ್ಕಿರುವ ಸಾಧನ ಎನ್ನುತ್ತಾನೆ. ಈ ಮಾತುಗಳು ಆಲಿಸಬೇಕು: "Beauty in the wikest sense of aesthetic value, is impossible without the in sertion of distance" (Aesthetics-P.118).

ಮಾನಸಿಕ ದೂರವೆಂದರೆ, ಮನುಷ್ಯನು ವ್ಯವಹಾರಿಕ ದೃಷ್ಟಿಯ ಬಂಧನದಿಂದ ಹೊರಗೆ ತಂದುಕೊಂಡು ಕಾವ್ಯವನ್ನು ಅಥವಾ ಕಲೆಯನ್ನು ಪರಿಗ್ರಹಿಸುವ ಒಂದು ಮಾನಸಿಕ ಸ್ಥಿತಿಯಾಗಿದೆ. ಇಂತಹ ಸ್ಥಿತಿಯಲ್ಲಿಯೇ ಕಾವ್ಯ-ಕಲೆಗಳ ನಿಜವಾದ ಸೌಂದರ್ಯಾನುಭೂತಿಯು ಸಾಧ್ಯವಾಗುತ್ತದೆ. "ಕಲೆ-ಕಾವ್ಯಗಳನ್ನು ಮಾನಸಿಕ ದೂರವನ್ನು ಇರಿಸಿಕೊಂಡು ನೋಡಬೇಕೆಂದು" ಹೇಳುವುದಕ್ಕೆ ಎಡ್ವರ್ಡ್ ಬುಲ್ಲೋನಿಗೆ ಈ ಕಾರಣವೇ ಅತ್ಯಂತ ಮುಖ್ಯವಾಗಿದೆ.

ಕಾವ್ಯ-ಕಲೆಗಳನ್ನು ಪ್ರಯೋಜನ ದೃಷ್ಟಿಯಿಂದ ನೋಡಲು ಹೊರಟಾಗ, ಅಲ್ಲಿ ಸಹೃದಯ ಅಥವಾ ಕಲಾಸಕ್ತನಿಗೆ ಅವನ ಸ್ವಂತ ಲಾಭ-ಹಾನಿ, ಸುಖ-ದುಃಖ, ಶುಭ-ಅಶುಭ, ಬೇಕು-ಬೇಡ, ಇಷ್ಟ-ಅನಿಷ್ಟ ಇಂತಹ ಭಾವನೆಗಳು ಎದುರಾಗಿ ನಿಂತುಕೊಳ್ಳುತ್ತವೆ. ಈ ಭಾವನೆಗಳ ಪರಿಮಿತಿಯಿಂದ ಕಾವ್ಯ-ಕಲೆಗಳನ್ನು ಬಿಡಿಸಿ ಇರಿಸುವುದು ಪ್ರಥಮ ಕಾರ್ಯ ಮತ್ತು ತನ್ನ ಮನಸ್ಸನ್ನು ಈ ವೈಯಕ್ತಿಕ ನೆಲೆಯಿಂದ ಸ್ಥಳಾಂತರಿಸಿ, ಅವನ್ನು ನೋಡುವುದು ಎರಡನೆಯ ಕಾರ್ಯ. "ಮನಸ್ಸು" ನಿರಾಕಾರವಾದುದು. ಅದೊಂದು ವಸ್ತುವಲ್ಲ, ಆದುದರಿಂದ ಅದಕ್ಕೆ ಬಣ್ಣ-ಸ್ಪರ್ಶ ಇತ್ಯಾದಿಗಳ ಸಂಗವು ಇರಲಾರದು. ಒಂದು ಭೌತಿಕ ವಸ್ತುವಿನಂತೆ, ಮನಸ್ಸನ್ನು ನಾವು ಕೈಯಿಂದ ಎತ್ತಿ, ಎಲ್ಲಿ ಬೇಕಾದಲ್ಲಿ ಇಡುವುದಕ್ಕೆ ಸಾಧ್ಯವಿಲ್ಲ. ಅದು ಅಂತರಂಗದ ಒಂದು ವಿಶೇಷ ಕ್ರಿಯೆ. ಆದುದರಿಂದ ಸಹೃದಯ ಅಥವಾ ಪ್ರೇಕ್ಷಕನು ಯಾವ ಮಾನಸಿಕ ಸ್ಥಿತಿಯಿಂದ ಕಾವ್ಯ-ಕಲೆಗಳನ್ನು ಅನುಭವಿಸಿದಾಗ ಅವು ಸಂತೋಷವನ್ನು ಕೊಡುತ್ತವೆಯೋ ಅಂತಹ ಮನಸ್ಸಿನ ಸ್ಥಿತಿಯೇ ಎಡ್ವರ್ಡ್ ಬುಲ್ಲೋ "ಮಾನಸಿಕ ದೂರ" ಎಂದು ಕರೆದಿರುವುದು.

Scanned with CamScanner

"ಮಾನಸಿಕ ದೂರ"ವೆಂಬುದು ಕೇವಲ ಸಹೃದಯ ಅಥವಾ ಕಲೆಯನ್ನು ಅನುಭವಿಸುವ ಕಲಾಭಿಮಾನಿಗೆ ಅಷ್ಟೇ ಸಂಬಂಧ ಪಟ್ಟುದಲ್ಲ. ಅದು ಕವಿ ಮತ್ತು ಕಲಾವಿದರಿಗೂ ಸಂಬಂಧಪಡುತ್ತದೆ. ಅವರು ತಮ್ಮ ಕೃತಿಗಳನ್ನು ನಿರ್ಮಿಸುವಾಗ, ಅವುಗಳ "ರಸ" ವಿಶೇಷದೆಡೆಗೆ ಗಮನ ಕೊಟ್ಟಿರುತ್ತಾರೆ. ಸಹೃದಯನು ಕಾವ್ಯವನ್ನು ಓದಿದಾಗ ಅದು ಅವನಿಗೆ ಆನಂದವನ್ನು ನೀಡಬೇಕು. ಅಂದಾಗ ಕವಿಯ ರಚನೆಯು ಸಾರ್ಥಕವಾದಂತೆ. ಈ ದಿಶೆಯಲ್ಲಿ ಕವಿಯಾದವನು "ಮಾನಸಿಕ ದೂರ"ದ ಸ್ಥಿತಿಯಲ್ಲಿ ನಿಂತುಕೊಂಡೇ ಕಾವ್ಯವನ್ನು ರಚಿಸುತ್ತಾನೆ, ರಚಿಸಬೇಕಾಗುತ್ತದೆ. ಇದನ್ನೇ ಎಡ್ವರ್ಡ್ ಬುಲ್ಲೋ ಹೀಗೆ ಹೇಳುತ್ತಾನೆ: "What is therefore, both in apprecition and production most desirable is the utmost decrease of distance without its disappearence" (Aesthetics-P.100).

ಕವಿ ಅಥವಾ ಸಹೃದಯನ ಎದುರಿನಲ್ಲಿ ಎರಡು ಲೋಕಗಳು ಇರುತ್ತವೆ. ಒಂದು ಅವರವರ ವೈಯಕ್ತಿಕವಾದ ಲೋಕ; ಇನ್ನೊಂದು ಕಾವ್ಯಲೋಕ ಅಥವಾ ಭಾವದ ಲೋಕ. ದೈನಂದಿನ ಬದುಕಿನಲ್ಲಿ ಕವಿಯಾದವನು ಲೋಕದ ವ್ಯಕ್ತಿಯಾಗಿ ಜೀವನ ನಡೆಸುವಾಗ ಹಲವಾರು ವ್ಯಕ್ತಿಗಳನ್ನು ಕಾಣುತ್ತಾನೆ; ಹಲವಾರು ಸಂದರ್ಭಗಳ ಒಳಗೆ ಪ್ರವೇಶ ಮಾಡುತ್ತಾನೆ; ಹಲವಾರು ವಸ್ತುಗಳನ್ನು ನೋಡುತ್ತಾನೆ. ಭೌತಿಕ ಲೋಕದಲ್ಲಿ ವ್ಯಕ್ತಿಗೆ ಸಂದರ್ಭ, ವಸ್ತುವಾದಿಗಳು ಕವಿಯ ಕಾವ್ಯ ರಚನೆ, ಪ್ರೇರಣೆಯನ್ನೂ ಒದಗಿಸಬಲ್ಲವು. ಆದರೆ ಅವು ಕಾವ್ಯಲೋಕದಲ್ಲಿ ಬಂದಾಗ ಅವುಗಳಿಂದ ವಿಶೇಷವಾದ ಹರುಷವು ಕವಿಗೂ ಪ್ರಾಪ್ತವಾಗುತ್ತದೆ, ಸಹೃದಯನಿಗೂ ಸಿಕ್ಕುತ್ತದೆ. ಲೋಕದಲ್ಲಿ "ಗುಲಾಬಿ" ಹೂವನ್ನು ನಾವು ಹಲವಾರು ಸಲ ನೋಡುತ್ತೇವೆ. ಅದು ನಮಗೆ ಅಂತಹ ವಿಶೇಷವಾದ ಅನುಭವ ಉಂಟುಮಾಡುವುದಿಲ್ಲ. ಹತ್ತು - ಹಲವಾರು ಹೂವುಗಳಲ್ಲಿ ಅದು ಒಂದು ಹೂವಾಗಿ ನಮ್ಮ ಪರಿಭಾವನೆಗೆ ಬರುತ್ತದೆ. ಆದರೆ ಗುಲಾಬಿಯನ್ನು ಕುರಿತು ಕವಿಯಾದವನು ಒಂದು ಕಾವ್ಯವನ್ನು ಬರೆದರೆ ಅದು ನಮಗೆ ಹೆಚ್ಚು ಆನಂದವನ್ನುಂಟುಮಾಡುತ್ತದೆ.

ಲೋಕದಲ್ಲಿ ನಾವು "ಗುಲಾಬಿ"ಯನ್ನು ನೋಡುವಾಗ, ಅಲ್ಲಿನ ನಮ್ಮ ದೃಷ್ಟಿಯು ವ್ಯವಹಾರಿಕವಾಗಿರುತ್ತದೆ. ಹೀಗಾಗಿ ನಮಗೆ ಅದು ಹೆಚ್ಚು ಆನಂದವನ್ನು ಉಂಟು ಮಾಡುವುದಿಲ್ಲ. ಆದರೆ ಕಾವ್ಯ ಅಥವಾ ಭಾವಲೋಕದಲ್ಲಿ ವರ್ಣಿತಗೊಂಡಿರುವ "ಗುಲಾಬಿ"ಯ ದರ್ಶನ ಹೊಂದುವಾಗ ನಮ್ಮ ಮನಸ್ಸು ನಿಜವಾಗಿಯೂ ನಿರ್ಲಿಪ್ತ ಸ್ಥಿತಿಯಲ್ಲಿರುತ್ತದೆ. ಅದಕ್ಕೆ ವೈಯಕ್ತಿಕವಾದ ವಿಷಯಗಳ ಯಾವ ಲೇಪವೂ ಅಂಟಿರುವುದಿಲ್ಲ. ಆದುದರಿಂದ ಮಾನಸಿಕ ದೂರದ ಕಾರಣದಿಂದಾಗಿ ಭಾವಲೋಕದ ಗುಲಾಬಿಯು ನಮಗೆ ಹೆಚ್ಚು ಪ್ರಿಯವೂ, ಆನಂದದಾಯಕವೂ ಆಗಿ ಕಾಣುತ್ತದೆ. ಕವಿ ಅಥವಾ ಕಲಾವಿದನು ಲೋಕದ ಪರಿಸರಕ್ಕಿಂತಲೂ ಬೇರೆಯಾದ ಪರಿಸರವನ್ನು ನಿರ್ಮಿಸಿ, ಆ ಪರಿಸರದಲ್ಲಿ ವಸ್ತು - ಸನ್ನಿವೇಶಗಳನ್ನು ನಿಲ್ಲಿಸುತ್ತಾನೆ. ಹೀಗಾಗಿ ಅವು ಲೋಕದ ಪೂರ್ವಾಶ್ರಮದ ಸ್ವರೂಪಕ್ಕಿಂತಲೂ, ವಿಶೇಷವಾದ ಸ್ವರೂಪವನ್ನು ವ್ಯಂಜಿಸಲು ಸಮರ್ಥವಾಗುತ್ತವೆ. ಈ ಸಾಮರ್ಥ್ಯವನ್ನು "ಮಾನಸಿಕ ದೂರ"ದಿಂದ ಮಾತ್ರ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಸಹೃದಯನು "ಕಾವ್ಯ"ವನ್ನು ಆಸ್ವಾದಿಸುವಾಗ



Scanned with CamScanner

ಅದೊಂದು ಕಲಾಕೃತಿಯೆಂದೇ ಆಸ್ವಾದಿಸುತ್ತಾನೆ. ಅಂತಹ ನೆಲೆಯನ್ನು ಕಲಾಕೃತಿಯೇ ಆತನಿಗೆ ಒದಗಿಸಿಯೂ ಕೊಡುತ್ತದೆ. ಇಲ್ಲಿ ಲೋಕ ವ್ಯವಹಾರದ ಸ್ತರದಲ್ಲಿ "ಭಾವ"ದ ಅನುಭವದಲ್ಲಿದ್ದ ಏನೆಲ್ಲ ವಿಷಯ-ವಸ್ತುಗಳು ಕಲಾಲೋಕ ಪ್ರವೇಶ ಮಾಡಿದಾಗ, ಲೋಕದ ಭಾವವು ರಸಭಾವವಾಗುತ್ತದೆ. ಸಹೃದಯನಿಗೆ ಅದು ರಸತ್ವದ "ಅನುಭವವನ್ನು" ಉಂಟುಮಾಡುತ್ತದೆ. ಹೀಗೆ ಭವದ ನೆಲೆಯಿಂದ ಭಾವಾನುಭವಗಳನ್ನು ಬಿಡಿಸಿ, ಅಸಾಧ್ಯವಾಗುವಂತಹ "ರಸ"ದ ನೆಲೆಗೆ ವಸ್ತು - ವಿಷಯಾದಿಗಳನ್ನು ಏರಿಸಿ ನೋಡುವಂತಹ ಮನಸ್ಸಿನ ಸ್ಥಿತಿಯೆ ಕವಿ ಅಥವಾ ಕಲಾವಿದನ "ಮಾನಸಿಕ ದೂರ"ವಾಗಿದೆ. ಇದುವೆ ಸಹೃದಯನ ರಸಾಸ್ವಾದನೆಯ ಸ್ಥಿತಿಯೂ ಆಗಬಹುದಾಗಿದೆ.

ಕವಿ ಅಥವಾ ಕಲೆಗಾರನು ತಾನು ಬದುಕುವ ಲೋಕದೊಂದಿಗೆ ತನ್ನದೆ ಆದ ಒಂದು ವಿಧವಾದ ವಿಶಿಷ್ಟ ಸಂಬಂಧವನ್ನು ಇರಿಸಿಕೊಂಡಿರುತ್ತಾನೆ. ಹಾಗೆಯೇ ಸಹೃದಯ ಅಥವಾ ಪ್ರೇಕ್ಷಕನು ಕಾವ್ಯ ಅಥವಾ ಕಲೆಯೊಂದಿಗೆ ತನ್ನದೇ ಆದ ನಂಟನ್ನು ಇರಿಸಿಕೊಂಡಿರುತ್ತಾನೆ. ಸಂಸ್ಕೃತಲಾಕ್ಷಣಿಕ ಭಟ್ಟನಾಯಕನು ಈ ಸಂಬಂಧ ಕುರಿತು ಮಾತನಾಡಿದ್ದಾನೆ. ೧. ಕವಿ ಅಥವಾ ಕಲಾವಿದನು ಈ ಲೋಕವನ್ನು ನನ್ನದು ಎಂದು ಹೇಳುತ್ತಾನೆ. ೨. ಕವಿ ಅಥವಾ ಕಲಾವಿದನು ಈ ಲೋಕವು ನನ್ನದಲ್ಲ, ಅಥವಾ ಶತ್ರುವಿನದು ಎಂದು ಹೇಳುತ್ತಾನೆ. ೩. ಕವಿ ಅಥವಾ ಕಲಾವಿದನು ಲೋಕದ ಸಂಬಂಧವನ್ನು ಅಂಟಿಸಿಕೊಳ್ಳದೆ ತಟಸ್ಥವಾಗಿ ಉಳಿದುಬಿಡುತ್ತಾನೆ. ಹೀಗೆ ಭಟ್ಟನಾಯಕನು ಆ ಸಂಬಂಧಗಳನ್ನು ತಿಳಿಸುತ್ತಾನೆ. ಈ ಸಂಬಂಧಗಳು ಕವಿ ಅಥವಾ ಕಲಾವಿದನಿಗೆ ನಿಜವಾದ ಕಾವ್ಯಾನುಭವವನ್ನು ಒದಗಿಸಲಾರವು. ಅವು ಏನಿದ್ದರೂ "ಭಾವಾನುಭವ"ಗಳನ್ನು ಒದಗಿಸಿಕೊಡುವುದಕ್ಕೆ ಸೀಮಿತಗೊಂಡು ನಿಲ್ಲುತ್ತವೆ. ಭಾವಾನುಭವಗಳು ತೀರ ವೈಯಕ್ತಿಕವಾಗಿರುವುದರಿಂದ, ಅವು ಕಲೆಯ ಅನುಭವದಂತೆ ಸಾರ್ವತ್ರಿಕವಾದ ಅನುಭವಗಳನ್ನು ದೊರಕಿಸಿ ಕೊಡಲಾರವು. ಇದರ ಅರ್ಥ ಇಲ್ಲಿ ಕಲಾವಿದ ಅಥವಾ ಕವಿಯ ಮನಸ್ಸು ತನಗೆ ಬೇಕಾದ ಅಂತರವನ್ನು ಕಳೆದುಕೊಂಡಿದೆಯೆಂದು ಅರ್ಥವಾಗುತ್ತದೆ. ಮಾನಸಿಕ ದೂರದಿಂದ "ಸಾರ್ವತ್ರಿಕತೆ" ಲಭಿಸಿದರೆ, ಮಾನಸಿಕ ಅಂತರದ ಕಳೆದುಕೊಳ್ಳುವಿಕೆಯಿಂದ ವೈಯಕ್ತಿಕತೆ ಸಿಕ್ಕುವಂತಾಗುತ್ತದೆ.

ಕಾವ್ಯ-ಕಲೆಗಳ ಲೋಕದಲ್ಲಿ ರಾಗ-ದ್ವೇಷಗಳಿಲ್ಲದ, ತನ್ನದ್ದು-ಪರದ್ದು ಎಂಬ ಭಾವವಿಲ್ಲದ, ಪ್ರಯೋಜನ ಭಾವನೆಯಿಂದ ದೂರ ನಿಂತಿರುವ, ಒಟ್ಟಾರೆ ವೈಯಕ್ತಿಕವಲ್ಲದ ಬಂಧನಗಳಿಂದ ಬಿಡುಗಡೆಗೊಂಡ ಮನಸ್ಸನ್ನು ಹೊಂದಿ ವ್ಯವಹರಿಸಬೇಕಾಗುತ್ತದೆ. ಇದುವೇ "ಮಾನಸಿಕ ದೂರ" ಸ್ಥಿತಿಯ ವ್ಯವಹಾರ. ಈ ವ್ಯವಹಾರದಲ್ಲಿ ಕವಿ ಅಥವಾ ಕಲಾವಿದನೇ ಆಗಿರಬಹುದು, ಸಹೃದಯ ಇಲ್ಲವೆ ಪ್ರೇಕ್ಷಕನೇ ಆಗಿರಬಹುದು, ಅವರು ತಮಗೆ ಸಂಬಂಧ ಪಡುವ ಲೋಕಗಳಿಂದ ಪೂರ್ಣವಾಗಿ ತಟಸ್ಥ ಸ್ಥಿತಿಯಲ್ಲಿ ನಿಂತಿಲ್ಲವೆಂಬುದು ಸತ್ಯ. ತಾಟಸ್ಥ್ಯವು ಕಲಾಂತರದಲ್ಲಿ ಔದಾಸೀನ್ಯವನ್ನುಂಟುಮಾಡುತ್ತದೆ. ಕಲಾ ಲೋಕದೊಡನೆ ವೈಯಕ್ತಿಕವಲ್ಲದ ಸಂಬಂಧವನ್ನು ಇರಿಸಿಕೊಳ್ಳುತ್ತ, ಹಾಗೆಯೇ ದೂರದಲ್ಲಿ ನಿಂತುಕೊಳ್ಳುತ್ತ ಹೋಗಬೇಕಾಗುತ್ತದೆ. "ಮಾನಸಿಕ

ದೂರ"ವೆಂಬುದು ಒಂದು ರೀತಿಯಲ್ಲಿ ಕಲೆಗಳೊಡನೆ ಸಂಬಂಧವೂ ಆಗುತ್ತದೆ, ಇನ್ನೊಂದು ರೀತಿಯಲ್ಲಿ ಅವುಗಳೊಡನೆ ಸಾಧಿಸಿಕೊಳ್ಳುವ ಅಂತರವೂ ಆಗುತ್ತದೆ. ನಿಜವಾದ ಸೌಂದರ್ಯಸ್ವಾದನೆಯ ನಿಲುವನ್ನು ಈ ರೀತಿಯಾಗಿ ವಿವರಿಸಲೆಂದು ಎಡ್ವರ್ಡ್ ಬುಲ್ಲೋ "ಮಾನಸಿಕ ದೂರ" ತತ್ತ್ವವನ್ನು ಕಾವ್ಯ ಮೀಮಾಂಸೆಗೆ ಕೊಡುಗೆಯಾಗಿ ನೀಡುತ್ತಾನೆ.

ಒಂದೆಡೆಯಲ್ಲಿ ಬುಲ್ಲೋ "ಮಾನಸಿಕ ದೂರ"ವು ಕಲಾಲೋಕದ ಭಯಾನಕ ಘಟನೆಗಳನ್ನೂ ಅಭಯಭಾವದಿಂದ ಅನುಭವಿಸುವುದಕ್ಕೆ ಸಮರ್ಥವಾಗಿಸುತ್ತದೆ ಎಂದು ಹೇಳುತ್ತಾನೆ. "We watch the consummation of some impending catastrophe with the marvelling unconcern of a mere spectator." ಮಾನಸಿಕ ದೂರವು ಅಳವಡಿಸಿಕೊಂಡರೆ ನಡೆಯುತ್ತಿರುವ ವಿಪತ್ತಿನ ಅಪಾಯಕರ ಘಟನೆಗಳನ್ನೂ ಸಾಕ್ಷೀಪ್ರಜ್ಞೆಯಿಂದ ದೂರ ನಿಂತು ನೋಡಲು ಸಾಧ್ಯವಾಗುತ್ತದೆ ಎಂಬುದು ಮೇಲಿನ ಮಾತಿನ ತಾತ್ಪರ್ಯವಾಗಿದೆ.

ತನ್ನ ಈ ಮಾತಿಗೆ ಒಂದು ಉಹಾಪರಣೆಯನ್ನು ಕೊಡುತ್ತಾನೆ. ವಿಶಾಲವಾದ ಸಮುದ್ರದ ಒಂದು ದಡದ ಮೇಲೆ ನಾವು ಕುಳಿತು ಸಮುದ್ರದ ದೃಶ್ಯವನ್ನು ಪರಿಭಾವಿಸಿಕೊಳ್ಳುತ್ತಿದ್ದೇವೆಂದು ಕಲ್ಪಿಸಿಕೊಳ್ಳೋಣ. ಪ್ರಶಾಂತ ವಾತಾವರಣ, ತಲೆಯ ಮೇಲೆ ಸ್ವಚ್ಛವಾದ ನೀಲಿ ಆಕಾಶದ ಹೊದಿಕೆ, ಸಮುದ್ರದ ಮೇಲಿನ ತೆರೆಗಳ ಚೆಲ್ಲಾಟವು ಮನೋಹರಕ್ಕೆ ಮನೋಹರ. ತೆರೆಗಳನ್ನು ಭೇದಿಸಿಕೊಂಡು ಚಿಕ್ಕ ಹಡಗೊಂದು ಹೊರಟಿದೆ. ಅದರಲ್ಲಿ ಕೆಲವರು ಪಯಣ ಮಾಡುತ್ತಿದ್ದಾರೆ. ಒಟ್ಟಾರೆ ಈ ದೃಶ್ಯವು ನಮಗೆ ಅತ್ಯಂತ ಹರುಷವನ್ನುಂಟು ಮಾಡುತ್ತದೆ. ದೃಶ್ಯದ ರಸಾನುಭವದಲ್ಲಿ ನಾವು ಹೊರಗಿನ ಲೋಕವನ್ನೇ ಮರೆತುಬಿಡುತ್ತೇವೆ.

ಸ್ವಲ್ಪ ಸಮಯ ಸರಿದು ಹೋಗುತ್ತದೆ. ಸಮಯ ಎಷ್ಟಾಯಿತೆಂಬುದರ ಪರಿವೆಯೂ ಇರಲಾರದು. ಸಮುದ್ರದಲ್ಲಿ ಬಿರುಗಾಳಿ ಏಳುತ್ತದೆ. ಬಿರುಗಾಳಿಗೆ ಸಿಕ್ಕ ಹಡಗು ಅತ್ತ-ಇತ್ತ ಹೊಯ್ದಾಡತೊಡಗುತ್ತದೆ. ಆಗಲೂ ನಮಗೆ ಹಡುಗಿನ ದೃಶ್ಯವು ಹರುಷವನ್ನೇ ಉಂಟುಮಾಡುತ್ತದೆ. ಸ್ವಲ್ಪ ಸಮಯದ ನಂತರ ಯಾರೋ ಓಡುತ್ತ ಬರುತ್ತಾರೆ: ಹಡುಗಿನಲ್ಲಿ ನಿಮ್ಮ ತಂದೆ-ತಾಯಿ ಅಥವಾ ಬಂಧು-ಬಳಗ, ಕುಟುಂಬದವರು ಹೊರಟಿದ್ದಾರೆ ಎಂದು ಹೇಳುತ್ತಾರೆ. ಆಗ ಕೂಡಲೇ ನಾವು ಭೀತಿಗೆ ಒಳಗಾಗುತ್ತೇವೆ. ದುಃಖವು ನಮ್ಮನ್ನು ಆವರಿಸಿಕೊಂಡುಬಿಡುತ್ತದೆ. ಹಡುಗಿನಲ್ಲಿದ್ದವರನ್ನು ಉಳಿಸಿಕೊಳ್ಳುವುದಕ್ಕಾಗಿ ನಾವು ಹೌಹಾರಿ ಏನೆಲ್ಲ ಪ್ರಯತ್ನಕ್ಕೆ ತೊಡಗುತ್ತ, ಲೌಕಿಕ ವ್ಯಕ್ತಿಸ್ತರಕ್ಕೆ ಬಂದು ನಿಂತುಕೊಳ್ಳುತ್ತೇವೆ. ಎಲ್ಲಿಯವರೆಗೆ ನಾವು ನಮ್ಮ ಮನಸ್ಸಿನ ಅಂತರವನ್ನು ಉಳಿಸಿಕೊಂಡು ಸಮುದ್ರದ ದೃಶ್ಯವನ್ನು ನೋಡುತ್ತಿದ್ದೇವೆಯೋ, ಅಲ್ಲಿಯವರೆಗೆ ಅದು ನಮಗೆ ಆನಂದವನ್ನು ಉಂಟು ಮಾಡಿತು. ಯಾವಾಗ ನಮ್ಮ ಮನಸ್ಸು ವೈಯಕ್ತಿಕವಾದ ಸ್ವಾರ್ಥಕ್ಕೆ ಸಿಕ್ಕುಹಾಕಿ ಕೊಂಡಿತೋ, ಆಗ ಅಲ್ಲಿನ ಅಂತರವು ಕಡಿದುಹೋಗಿ, ಆ ಸಂದರ್ಭಕ್ಕೆ ಪೂರಕವಾದ ಲೋಕಭಾವದ ಛಾಯೆ ನಮ್ಮನ್ನು ಆವರಿಸಿಕೊಂಡಿತು. ಕಾವ್ಯ ಅಥವಾ ಕಲಾಲೋಕದಲ್ಲಿಯೂ ಹೀಗೆ ಆಗುತ್ತದೆ. ಎಲ್ಲಿಯವರೆಗೆ ಕಾವ್ಯ - ಕಲೆಗಳನ್ನು ನಾವು ವೈಯಕ್ತಿಕಸಂಗದಿಂದ ಬಿಡುಗಡೆಗೊಂಡಿರುವ ಮಾನಸಿಕ ಸ್ಥಿತಿಯಿಂದ

ನೋಡುತ್ತೇವೆಯೋ, ಅಲ್ಲಿಯವರೆಗೆ ಅವು ನಮಗೆ ರಸದ ಫಲಗಳಾಗಿ ಆನಂದವನ್ನು ಕೊಡುತ್ತವೆ. ಯಾವಾಗ ನಮ್ಮ ಮನಸ್ಸು ಅವುಗಳಲ್ಲಿ ಲೋಕದ ಭಾವಗಳನ್ನು ಹುಡುಕುವುದಕ್ಕೆ ಆರಂಭಿಸುತ್ತದೆಯೋ, ಆಗ ಅವು ಸೌಂದರ್ಯವನ್ನುಂಟುಮಾಡದ ಸಾಧನಗಳಾಗಿ ನಿಂತುಕೊಳ್ಳುತ್ತವೆ. ಎಡ್ವರ್ಡ್ ಬುಲ್ಲೋ ಮುಂದುವರೆದು "ಮಾನಸಿಕ ದೂರ" ತತ್ತ್ವದ ಕಾರ್ಯದ ಬಗೆಗೆ ಹೇಳುತ್ತಾನೆ: "The working of distance is according not simple but highly complex. It has a negative, in hibitory aspect the cutting out of the practical sides of things and our practical attitude to them and a positive side-the elaboration of the experience on the new basis created by the inhibitory action of distance" (Aesthetics, lectures and essays-P.94,95).

ಅಂದರೆ "ಮಾನಸಿಕ ದೂರ" ಪ್ರಕ್ರಿಯೆಯ ಕಾರ್ಯ ನಿರ್ವಹಣೆ ಸರಳವಾದುದಲ್ಲ. ತುಂಬಾ ಸಂಕೀರ್ಣವಾದುದದ್ದು. ಇದು ಎರಡು ಬಗೆಗಳಲ್ಲಿ ಕಾರ್ಯನಿರ್ವಹಿಸುತ್ತದೆ. ಒಂದು ನಿಷೇಧಾತ್ಮಕವಾದ ಹಿಂಜರಿಕೆಯ ಹಂತ, ಅಂದರೆ ವಸ್ತುಗಳ ವ್ಯವಹಾರಿಕ ಸಂಬಂಧವನ್ನು ಮತ್ತು ಅವುಗಳ ಲೌಕಿಕ ಪ್ರತಿಕ್ರಿಯೆಯನ್ನೂ ಕತ್ತರಿಸಿಕೊಳ್ಳುವುದರಿಂದ ಉಂಟಾಗುವ ಸ್ಥಿತಿ. ಇನ್ನೊಂದು ವಿಧಾಯಾತ್ಮಕ ಮುಖ ಅಂದರೆ ಆ ನಿಷೇಧಾತ್ಮಕ ಮನೋಧರ್ಮದಿಂದ ಉಂಟಾದ ಹೊಸ ವೇದಿಕೆಯ ಮೇಲೆ ನಿಂತು, ಹೊಸ ಅನುಭವಗಳನ್ನು ವಿಸ್ತರಿಸಿಕೊಳ್ಳುವುದು. ಈ ಎರಡು ರೀತಿಯಲ್ಲಿ "ಮಾನಸಿಕ ದೂರ"ದ ಕ್ರಿಯೆ ಪೂರ್ಣಗೊಳ್ಳುತ್ತದೆ ಎಂದು ಬುಲ್ಲೋ ಹೇಳುತ್ತಾನೆ.

ಬುಲ್ಲೋನ ಮಾತುಗಳಲ್ಲಿ ಸಂಬಂಧವೂ ಇದೆ, ಅಂತರವೂ ಇದೆ. ವಸ್ತುಗಳ ವ್ಯವಹಾರಿಕ ಸಂಬಂಧವನ್ನು ಕತ್ತರಿಸಿಕೊಳ್ಳುವುದು "ಅಂತರ"ದ ಹಂತ. ಹೊಸ ಅನುಭವಗಳನ್ನು ವಿಸ್ತರಿಸಿಕೊಳ್ಳುವುದು "ಸಂಬಂಧ"ದ ಹಂತ. ವರ್ಡ್ಸ್‌ವರ್ತ್‌ನ ಕಾವ್ಯದ ವಸ್ತುವಾಗಿರುವ "ಡೆಫೋಡಿಲ್ಸ್" ಹೂವು ಕೇವಲ ಲೌಕಿಕ ಜಗತ್ತಿನ ಹೂವು ಅಷ್ಟೇ ಅಲ್ಲ. ಕವಿಯು "ಡೆಫೋಡಿಲ್ಸ್" ಹೂವುಗಳನ್ನು ನೋಡಿಯೇ ಪದ್ಯವನ್ನು ಬರೆದಿದ್ದಾನೆ. ಲೋಕದ ಆ ಹೂವು ಕಾವ್ಯಲೋಕದಲ್ಲಿ ಬರುವಾಗ, ತನ್ನ ಲೋಕದ ವ್ಯವಹಾರಗಳನ್ನು ಕತ್ತರಿಸಿಕೊಂಡು ಬಂದಿದೆ. ಸಹೃದಯರು "ಡೆಫೋಡಿಲ್ಸ್" ಪದ್ಯವನ್ನು ಓದಿ ಅದರ ಪೂರ್ವಾಶ್ರಮವನ್ನು ಗ್ರಹಿಸುವುದಿಲ್ಲ. ಒಂದುವೇಳೆ ಹಾಗೆ ಅವರು ತಿಳಿದುಕೊಂಡರೆಂದಾದರೆ, ಅವರಿಗೆ ಆ ಪದ್ಯವು ಸರಿಯಾಗಿ ತಿಳಿಯಲಿಲ್ಲವೆಂದೇ ಅರ್ಥವಾಗುತ್ತದೆ ಅಥವಾ ಅವರು ಮಾನಸಿಕ ದೂರವನ್ನು ಕಳೆದುಕೊಂಡು "ಡೆಫೋಡಿಲ್ಸ್" ಪದ್ಯವನ್ನು ಓದಿದರೆಂದು ಅರ್ಥ. ಮಾನಸಿಕ ಅಂತರದಿಂದ ಪರಿಭಾವಿಸಿದಾಗ, ಆ ಪದ್ಯವು ನಮಗೆ "ಅಸ್ಥಿರ ಬದುಕಿ"ನ ಸ್ವರೂಪವನ್ನು ತಿಳಿಸುತ್ತ, ಜೀವನದ ಅವಧಿಯನ್ನು ಸಾರ್ಥಕ ಮಾಡಿಕೊಳ್ಳಬೇಕೆಂದು ಹೇಳುತ್ತದೆ.

ಎಡ್ವರ್ಡ್ ಬುಲ್ಲೋ "ಮಾನಸಿಕ ದೂರ" ತತ್ತ್ವವನ್ನು ಸೌಂದರ್ಯತತ್ತ್ವದ ತಳಹದಿಯಾಗಿ ನಿಲ್ಲುಸುತ್ತಾನೆ: "In the most general sence, distance is a factor in all arts" ಎನ್ನುವ ಅವನ ಮಾತು ಅದೇ ಆಗಿದೆ. ಕವಿ ಅಥವಾ ಕಲಾವಿದನಾಗಿರಬಹುದು,

ಸಹೃದಯ ಅಥವಾ ಪ್ರೇಕ್ಷಕನಾಗಿರಬಹುದು, ಅವರವರ ಲೋಕ ಮತ್ತು ಕಲಾವಸ್ತುಗಳೊಡನಿರುವ ಸಂಬಂಧವನ್ನು ಎಡ್ವರ್ಡ್ ಬುಲ್ಲೋ "ವಸ್ತುನಿಷ್ಠ" (objective) ಎಂದು ತಿಳಿಸುತ್ತಾನೆ. ಇಲ್ಲಿರುವ ವಸ್ತುನಿಷ್ಠತೆ ಅಥವಾ ವೈಯಕ್ತಿಕವಾದ ಸಂಬಂಧವು ಎಂತಹುದು? ಎನ್ನುವ ಪ್ರಶ್ನೆಗೆ ಅವನು "ಈ ವಸ್ತುನಿಷ್ಠತೆ ಅಥವಾ ವೈಯಕ್ತಿಕವಾದ ಸಂಬಂಧವು ಶೋಧಿತವಾದುದು, ಲೋಕಪ್ರಯೋಜನ ಪ್ರತಿಕ್ರಿಯೆಯನ್ನು ದಾಟಿದುದು" ಎಂದು ತಿಳಿಸುತ್ತಾನೆ. ಅವನು ಹೇಳುವ "ಮೂಲಭೂತವಾದ ಅಂತರದ ಸಿದ್ಧಾಂತ" (Fundamental conception of distance)ದಲ್ಲಿ ಎಲ್ಲ ವಿರೋಧಗಳೂ ಸಾಮರಸ್ಯವನ್ನು ಪಡೆದುಕೊಳ್ಳುತ್ತವೆ.

ಎಡ್ವರ್ಡ್ ಬುಲ್ಲೋನ ಪ್ರಕಾರ ಪ್ರಿಯ (Agrible) ಮತ್ತು ಸುಂದರ (Beautiful) ಈ ಪರಿಕಲ್ಪನೆಗಳ ನಡುವೆ ಒಂದಿಷ್ಟು ಅಂತರವಿದೆ. ಪ್ರಿಯ ಎನ್ನುವುದು ಲೌಕಿಕ ಪ್ರಧಾನವಾದುದು, ಅದು ತನ್ನ ಲೌಕಿಕತೆಯನ್ನು ಕಳೆದುಕೊಂಡಾಗ "ಸುಂದರ"ವಾಗುತ್ತದೆ (ಪಾ.ಕಾ.ಚಿಂ-ಪು.೪೫೫).

ಕಲೆಯಲ್ಲಿ ಅಭಿವ್ಯಕ್ತಗೊಂಡ ಸೌಂದರ್ಯ ಪ್ರಜ್ಞೆ (Aesthetic consciousness)ಗೆ ಮಾನಸಿಕ ದೂರವು ಅಗತ್ಯವಾದ ತತ್ತ್ವವಾಗಿದೆ ಎನ್ನುತ್ತಾನೆ ಬುಲ್ಲೋ.

ಎಡ್ವರ್ಡ್ ಬುಲ್ಲೋ "ವಸ್ತು ಮತ್ತು ವ್ಯಕ್ತಿಗಳ ಆಧಾರದ ಮೇಲೆ ಮಾನಸಿಕ ದೂರವು ಬೇರೆಬೇರೆಯಾಗಿ ನಿರ್ಧಾರಿತವಾಗುತ್ತದೆಂದು" ತಿಳಿಸುತ್ತಾನೆ. "In the short, distance may be said to be variable both according to the distancing power of the individual and according to the character of the object" (Asthetics-P.100) ಯಾರಿಗೆ ದೀರ್ಘಕಾಲದ ಕಲಾಸಂಸ್ಕಾರವು ಇರುತ್ತದೆಯೋ ಅವರು ಕಲೆಯ ಪರಿಭಾವನೆಯಲ್ಲಿ ಮಾನಸಿಕ ದೂರವನ್ನು ಸರಿಯಾಗಿ ಉಳಿಸಿಕೊಳ್ಳಬಲ್ಲರು. ಕಲಾಸಂಸ್ಕಾರ ಇಲ್ಲದವರಿಗೆ ಮಾನಸಿಕ ದೂರವು ಸಾಧ್ಯವಾಗದೆ ಹೋಗುತ್ತದೆ. ಅಲ್ಪಕಲಾ ಸಂಸ್ಕಾರವುಳ್ಳವರು ಕಡಿಮೆ ಪ್ರಮಾಣದಲ್ಲಿ ಮಾನಸಿಕ ದೂರವನ್ನು ಹೊಂದಿ, ನಂತರದಲ್ಲಿ ಅದನ್ನು ಅವರು ಕಳೆದುಕೊಂಡುಬಿಡಬಲ್ಲರು.

ಮಾನಸಿಕದೂರ ಕಾರಣದಿಂದಲೇ ಕಲಾವಿದನಿಗೆ ಕಲೆಯ ನಿರ್ಮಾಣವು ಸಾಧ್ಯವಾಗುತ್ತದೆ ಮತ್ತು ಕಲಾಸಕ್ತನಿಗೆ ಕಲೆಯ ರಸಾನುಭೂತಿಯು ಸಾಧ್ಯವಾಗುತ್ತದೆ. ಇದನ್ನೇ ಎಡ್ವರ್ಡ್ ಬುಲ್ಲೋ "Distance represent aesthetic appraciation and artistic creation" ಎಂದು ಹೇಳುತ್ತಾನೆ.

"ಮಾನಸಿಕ ದೂರದಿಂದ ಕಾವ್ಯದ ಆಸ್ವಾದನೆ, ಆಸ್ವಾದನೆಯಿಂದ ಆನಂದ ದೊರಕುತ್ತದೆ. ಆ ಆನಂದದಿಂದಲೇ ರಸಾನುಭವ" ಎಂಬುದು ಅವನ ದೃಢವಾದ ನಿಲುವು. "It is distance which makes the aesthetic object an and in itself. It is that which r aises art, beyond the narrow speare of individual interst and imparts to it that postulating character which the idealistic philosaphy of 19th century regarded as a metaphysical necessity. It lifts systemes and ends" (Aestheties-P.129). ಕಲಾತ್ಮಕ ವಸ್ತುವನ್ನು "ಆನಂದ ಪರ್ಯವಸಾಯಿಯನ್ನಾಗಿ ಮಾಡುವುದು ಈ ಮಾನಸಿಕ

Scanned with CamScanner

ದೂರವೇ. ಕಲೆಯನ್ನು ವೈಯಕ್ತಿಕ ಲೋಕಾಸಕ್ತಿಗಳ ಸಂಕುಚಿತ ವಲಯದಿಂದ ಮೇಲೆತ್ತಿ ೧೯ನೇ ಶತಮಾನದ ಆದರ್ಶವಾದೀ ತಾತ್ವಿಕರು ಹೇಳಿದ ಆಧ್ಯಾತ್ಮಿಕ ಅನಿವಾರ್ಯತೆಯನ್ನು ಇದು ಈಡೇರಿಸುತ್ತದೆ" ಎಂದು ಮೇಲಿನ ಅಭಿಪ್ರಾಯವು ಹೇಳುತ್ತದೆ.

## ಮಾನಸಿಕ ದೂರದ ಪ್ರಕಾರಗಳು:

ಎಡ್ವರ್ಡ್ ಬುಲ್ಲೋ ಮಾನಸಿಕ ದೂರದ ಪ್ರಕಾಗಳನ್ನು ಕುರಿತು ಮಾತನಾಡುತ್ತಾರೆ. ಅವನು ಮೂರು ಪ್ರಕಾರದ ಮಾನಸಿಕ ದೂರಗಳನ್ನು ಹೇಳುತ್ತಾನೆ:

೧. ಪ್ರಾದೇಶಿಕ ಅಂತರ (Actual spatial distance)

೨. ನಿರೂಪಿತ ಪ್ರಾದೇಶಿಕ ಅಂತರ (Represented spatial distance)

೩. ಪ್ರಾಪಂಚಿಕ ಅಥವಾ ಕಾಲಾಂತರ (Temporal distance)

೧. ಪ್ರಾದೇಶಿಕ ಅಂತರವು ಕಲಾಕೃತಿಗೂ ಸಹೃದಯನಿಗೂ ಇರುವ ಯಥಾವತ್ತಾದ ಅಂತರವನ್ನು ಸೂಚಿಸುತ್ತದೆ. ಮೊಟ್ಟಮೊದಲಿಗೆ ಅರಿಸ್ಟಾಟಲನು ಇದರ ಬಗೆಗೆ ಉಲ್ಲೇಖ ಮಾಡುತ್ತಾನೆ. ಅವನು ಚಿತ್ರ, ಶಿಲ್ಪ ಮೊದಲಾದ ಕಲಾಕೃತಿಗಳಿಗೆ ಸಂಬಂಧಿಸಿದಂತೆ ಈ ದೂರವನ್ನು ಗುರುತಿಸುತ್ತಾನೆ. "ಕಲಾಕೃತಿಗಳನ್ನು ಸ್ವರೂಪಕ್ಕನುಗುಣವಾಗಿ ಯಾವುದೋ ಒಂದು ಕೋನದಲ್ಲಿ ನಿಂತು ನೋಡಬೇಕಾಗುತ್ತದೆ. ತೀರಾ ಹತ್ತಿರ ಹೋದರೆ ಅವುಗಳ ಸೊಗಸು ಕಾಣುವುದಿಲ್ಲ" ಎಂದಿರುವನು ಅರಿಸ್ಟಾಟಲ್. ಬುಲ್ಲೋ ಈ ಮಾತನ್ನು ಸಮ್ಮತಿಸುತ್ತಾನೆ. ನಿಶ್ಚಿತವಾದ ಪ್ರಾದೇಶಿಕ ಅಂತರದಿಂದ ಕಲೆಯ ಸೌಂದರ್ಯವು ಇಮ್ಮಡಿಸುತ್ತದೆಂಬ ಭಾವನೆ ಅವನಿಗೂ ಇದೆ.

ಶ್ರವಣಬೆಳ್ಗೊಳದ ವಿಂಧ್ಯಗಿರಿಯ ಬೆಟ್ಟದ ಮೇಲೆ ಏಕಶಿಲೆಯಲ್ಲಿ ನಿರ್ಮಿಸಲಾಗಿರುವ ಗೊಮ್ಮಟನ ಪ್ರತಿಮೆಯು ಜಗತ್ತಿನ ಆಶ್ಚರ್ಯಗಳಲ್ಲಿ ಒಂದು ಭವ್ಯ ಶಿಲ್ಪವಾಗಿ ನಿಂತು ಕೊಂಡಿದೆ. ಅದರ ನಿಜವಾದ ಸೌಂದರ್ಯಾನುಭೂತಿ ಪಡೆಯಬೇಕಾದರೆ, ಆ ಮೂರ್ತಿಯ ಹತ್ತಿರದಲ್ಲಿಯೇ ಹೋಗಿ ನಿಂತು ನೋಡಬಾರದು. ಹಾಗೆ ನೋಡಿದಾಗ ಅದರ ಭವ್ಯತೆಯು ನಮ್ಮನ್ನು ಆವರಿಸುವುದಿಲ್ಲ. ಭವ್ಯತೆಯು ದೊರಕುವಂತಹ ನಿಶ್ಚಿತ ಸ್ಥಳದಲ್ಲಿ ನಿಂತು ನೋಡಬೇಕು. ಇಂದಿನಂತೆ ಶ್ರವಣಬೆಳ್ಗೊಳದ ಪರಿಸರವು ಬೆಳೆಯದೆ ಇದ್ದ ಸಂದರ್ಭದಲ್ಲಿ ಗೊಮ್ಮಟ ಶಿಲ್ಪವನ್ನು ಅದರ ಎದುರಿಗೆ ಇರುವ ಚಂದ್ರಗಿರಿಯ ಬೆಟ್ಟದ ಮೇಲೆ ನಿಂತು ನೋಡುತ್ತಿದ್ದರಂತೆ. ಅಲ್ಲಿಂದ ನೋಡಿದರೆ ಗೊಮ್ಮಟ ಶಿಲ್ಪವು ಅಪೂರ್ವ ಸೌಂದರ್ಯವನ್ನು ಪ್ರೇಕ್ಷಕರಿಗೆ ನೀಡುತಿದ್ದಿತು. ಇಂದು ಹೀಗೆ ನೋಡುವುದು ಸಾಧ್ಯವಿಲ್ಲ. ಏಕೆಂದರೆ ವಿಂಧ್ಯಗಿರಿ ಮತ್ತು ಚಂದ್ರಗಿರಿ ನಡುವಿನ ಪರಿಸರದಲ್ಲಿ ಊರು ಬೆಳೆದು ನಿಂತಿದೆ. ಅಲ್ಲಿ ತಲೆ ಎತ್ತಿರುವ ಕಟ್ಟಡ, ಬೆಳೆದ ಗಿಡ-ಮರಾದಿಗಳು ಅಡ್ಡಲಾಗಿ ಬಂದು, ಪ್ರೇಕ್ಷಕರಿಗೆ ಅಡ್ಡಿಯನ್ನುಂಟು ಮಾಡುತ್ತವೆ. ವಿಂಧ್ಯಗಿರಿಯ ಬೆಟ್ಟವನ್ನೇರಿ ಗೊಮ್ಮಟನ ಸಮ್ಮುಖಕ್ಕೆ ಹೋದಾಗ, ಸುಮಾರು ಹತ್ತು-ಹದಿನೈದು ಅಡಿಗಳಷ್ಟು ಅಂತರದಲ್ಲಿ

ನಿಂತುಕೊಂಡಾದರೂ ಪ್ರತಿಮೆಯನ್ನು ನೋಡಿದರೆ ಸರಿಯಾದೀತು. ಪ್ರತಿಮೆಯ ಅಡಿಯ ಸ್ಥಳದಲ್ಲೇ ನಿಂತು, ತಲೆ ಎತ್ತಿ ಅದನ್ನು ನೋಡುವಾಗ, ಪ್ರೇಕ್ಷಕನು ನಿಶ್ಚಿತವಾದ ಪ್ರಾದೇಶಿಕ ಅಂತರವು ಕಳೆದುಕೊಂಡು ಬಿಡುತ್ತಾನೆಂದು ಹೇಳಬೇಕಾಗುತ್ತದೆ. ಬಿಜಾಪುರದ ಗೋಳಗುಮ್ಮಟವಾಗಿರಬಹುದು, ಅಗ್ರಾದ ತಾಜ್‌ಮಹಲ್ ಆಗಿರಬಹುದು ಇಂತಹ ಶಿಲ್ಪಕೃತಿಗಳನ್ನು ನೋಡುವಾಗ ಮೇಲಿನ ಅಂಶಗಳನ್ನು ಪ್ರೇಕ್ಷಕರು ಗಮನದಲ್ಲಿಡಬೇಕಾದುದು ಅವಶ್ಯಕ.

೨. ನಿರೂಪಿತ ಪ್ರಾದೇಶಿಕ ಅಂತರವು ಚಿತ್ರಕಲೆಗಳಿಗೆ ಸಂಬಂಧಿಸಿದ ಅಂತರವಾಗಿದೆ. ಪ್ರೇಕ್ಷಕರು ಚಿತ್ರಕಲೆಯನ್ನು ವೀಕ್ಷಿಸುವಾಗ ನಿರೂಪಿತವಾದ ಪ್ರಾದೇಶಿಕ ಅಂತರದಲ್ಲಿ ನಿಂತುಕೊಂಡು ಅದನ್ನು ನೋಡಬೇಕೆಂದು ಬುಲ್ಲೋ ಹೇಳುತ್ತಾನೆ. ಅಂದಾಗ ಅವುಗಳಿಂದ ಪ್ರೇಕ್ಷಕರಿಗೆ ರಸಾನುಭೂತಿಯು ಉಂಟಾಗುತ್ತದೆ. ಯಥಾದೃಷ್ಟಿ ನಿರೂಪಣೆಯ ರೂಪದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅಂದರೆ ಚಿತ್ರಕಲೆ ಒಂದು ಭಿತ್ತಿಯ ಮೇಲೆ ರಚಿತವಾಗಿದ್ದರೂ, ಬೇರೆ ಬೇರೆ ಅಂತರಗಳ ವೀಕ್ಷಣೆಯಿಂದ ಹೊಸ ಅನುಭವ ತರುತ್ತದೆ.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿನ ಚಿತ್ರಗ್ಯಾಲರಿಯಲ್ಲಿರುವ "ದೀಪದ ಮಹಿಳೆ"ಯ ಚಿತ್ರಕಲೆಯು ಪ್ರೇಕ್ಷಕರನ್ನು ಸೆಳೆಯುತ್ತದೆ. ಒಂದು ಕೋಣೆಯೊಳಗೆ ಎತ್ತರದ ಪೀಠದ ಮೇಲೆ ಚಿತ್ರವನ್ನು ಇರಿಸಲಾಗಿದೆ. ಕೋಣೆಯಲ್ಲಿ ಮಂದವಾದ ಕತ್ತಲೆಯು ಹರಡಿಕೊಂಡಂತಿದೆ. ಮಹಿಳೆಯು ತನ್ನ ಎಡಕರದಲ್ಲಿ ಹಿಡಿದ ದೀಪಕ್ಕೆ ಗಾಳಿ ಹತ್ತದಿರಲೆಂದು ಬಲಕರದಿಂದ ಆಸರೆ ಒದಗಿಸಿದ್ದಾಳೆ. ಚಿತ್ರಕಲಾವಿದನು ದೀಪದ ಬೆಳಕು ಮಹಿಳೆಯ ಮುಖದ ಮೇಲೆ ಬಿದ್ದಂತೆ ಚಿತ್ರಿಸಿದ್ದಾನೆ. ಚಿತ್ರಕೋಣೆಯ ಎದುರಿನಲ್ಲಿ ನಿರೂಪಿತ ಪ್ರಾದೇಶಿಕ ಅಂತರದಲ್ಲಿ ನಿಂತುಕೊಂಡು "ದೀಪದ ಮಹಿಳೆ" ಚಿತ್ರಕಲಾ ಕೃತಿಯನ್ನು ನೋಡಿದರೆ, ಜೀವಂತ ಮಹಿಳೆಯೊಬ್ಬಳು ಕತ್ತಲು ಪರಿಸರದಲ್ಲಿ ದೀಪ ಹಿಡಿದುಕೊಂಡು ಬರುತ್ತಿದ್ದಂತೆ ಕಾಣುತ್ತದೆ.

ನಾವು ತೆಗೆಯಿಸಿಕೊಳ್ಳುವ ಫೋಟೋಗಳು ಒಂದು ಅರ್ಥದಲ್ಲಿ ನಮ್ಮ ಛಾಯಚಿತ್ರಗಳೇ ಆಗಿರುತ್ತವೆ. ಕ್ಯಾಮರದ ಕಣ್ಣು ನಮ್ಮನ್ನು ಬೇರೆ ಬೇರೆ ಕೋನದಿಂದ ನೋಡಿ, ಮುದ್ರಿಸಿಕೊಂಡ ಚಿತ್ರಗಳು ಬೇರೆ ಬೇರೆ ರೀತಿಯಲ್ಲಿ ಕಾಣುತ್ತವೆ. ಕೆಲವು ಸುಂದರವಾಗಿ ಕಂಡರೆ ಮತ್ತೆ ಕೆಲವು ಸುಂದರವಾಗಿ ಕಾಣದೆ ಇರಬಹುದು. ಕೆಲವು ಛಾಯಚಿತ್ರಗಳು ಎಡಭಾಗದಿಂದ ತೆಗೆದರೆ ಸರಿಯಾಗಿ ಬರುತ್ತವೆ. ಮತ್ತೆ ಕೆಲವರ ಚಿತ್ರಗಳು ಎದುರಿನಿಂದ ಅಥವಾ ಬಲಭಾಗದಿಂದ ತೆಗೆದರೆ ಮಾತ್ರ ಸುಂದರವಾಗಿ ತೋರುವ ಸಾಧ್ಯತೆಯಿರಬಹುದು. ಇವೆಲ್ಲ ಒಂದು ವಿಧದಲ್ಲಿ ನಿರೂಪಿತ ಪ್ರಾದೇಶಿಕ ಅಂತರದ ಉದಾಹರಣಗಳೇ ಆಗುತ್ತವೆ.

೩. ಪ್ರಾಪಂಚಿಕ ಅಂತರ ಅಥವಾ ಕಾಲಾಂತರವು ಸಾಹಿತ್ಯಕೃತಿಗಳಿಗೆ ಸಂಬಂಧಪಡುವ ಅಂತರವಾಗಿದೆ. ಒಂದು ಕಾವ್ಯವನ್ನು ಪರೀಶೀಲಿಸುವುದಕ್ಕೆ ಮೊದಲು ಓದುಗನು ಅದು ರಚಿತಗೊಂಡಿರುವ ಕಾಲವು ಯಾವುದು ಎಂಬುದನ್ನು ನೋಡಬೇಕಾಗುತ್ತದೆ. ಒಂದು ಕಾಲದಲ್ಲಿ ರಚನೆಗೊಂಡ ಕೃತಿಯನ್ನು ಆ ಕಾಲದ ಹಿನ್ನೆಲೆಯಲ್ಲಿ ಪರಿಭಾವಿಸಿದರೆ, ಓದುಗನಿಗೆ ಸರಿಯಾಗಿ



Scanned with CamScanner

ಅದರ ಅಂತರಂಗವು ತಿಳಿಕೆಗೆ ಬರುತ್ತದೆ. ಯಾವುದೋ ಕಾಲದಲ್ಲಿ ಹುಟ್ಟಿದ ಒಂದು ಕೃತಿಯನ್ನು ತಂದು ತನ್ನ ಸಮಕಾಲೀನತೆಯ ಬೇಕು-ಬೇಡಗಳಿಗೆ ಅನ್ವಯಿಸುತ್ತ ಹೊರಟರೆ, ಅವನು ಕಾಲಾಂತರವನ್ನು ಕಳೆದುಕೊಂಡು, ಕೃತಿಯ ರಸಾನುಭೂತಿಯಿಂದ ವಂಚಿತನಾಗುತ್ತಾನೆ. ವ್ಯಾಸನು ತನ್ನ ಮಹಾಭಾರತದಲ್ಲಿ ದ್ರೌಪದಿಯನ್ನು ಪಂಚವಲ್ಲಭೆಯನ್ನಾಗಿ ಮಾಡಿದ್ದಾನೆ. ಆಧುನಿಕ ಓದುಗರು ಇಪ್ಪತ್ತೊಂದನೆಯ ಶತಮಾನದಲ್ಲಿ ನಿಂತುಕೊಂಡು, ಅದನ್ನು ಓದುವಾಗ, ವ್ಯಾಸನ ದ್ರೌಪದಿಯ ಪಾತ್ರ ರಚನೆಯು ಅನೌಚಿತ್ಯವಾಗಿ ಕಾಣುತ್ತದೆ. ಏಕೆಂದರೆ ಇಂದು "ಬಹು ಪತಿತ್ವ" ಪದ್ಧತಿಯು ಶಿಷ್ಟ ಸಮಾಜದಲ್ಲಿ ಕಾಣಲಾರೆವು. ಇದನ್ನೇ ನಾವು ಒಂದು ಸಮಸ್ಯೆಯನ್ನಾಗಿಟ್ಟುಕೊಂಡು ವ್ಯಾಸನ ಭಾರತವನ್ನು ನೋಡುತ್ತ ಹೊರಟರೆ, ಅಲ್ಲಿನ ಎಷ್ಟೋ ರಸಪ್ರಸಂಗಗಳು ಕೈತಪ್ಪಿ ಹೋಗಿಬಿಡುತ್ತವೆ. ದ್ರೌಪದಿಯ ಪಾತ್ರ ಚಿತ್ರಣವನ್ನು ಮೊದಲಿಗೆ ಓದುಗನು ವ್ಯಾಸನ ಸಾಮಾಜಿಕ ಪರಿಸರದ ಹಿನ್ನಲೆಯಲ್ಲಿಯೇ ವಿಶ್ಲೇಷಣೆಗೆ ಒಳಗು ಮಾಡಬೇಕು. ಅಂದಾಗ ಆಗಿನ ಕಾಲದ "ಬಹುಪತಿತ್ವ" ಪದ್ಧತಿಯು ದ್ರೌಪ್ರದಿಗೆ ಅನ್ವಯಿಸಿದುದು ಸರಿಯಾಗಿ ಕಾಣಬಹುದು. ಕನ್ನಡದ ಕವಿ ಪಂಪನು ವ್ಯಾಸಭಾರತವನ್ನೇ ಆಧಾರವಾಗಿ ಮಾಡಿಕೊಂಡು ತನ್ನ ಕಾವ್ಯವನ್ನು ರಚಿಸಿದನು. ಆದುದರಿಂದ ಪಂಪ ಭಾರತವನ್ನು ಓದುವ ಓದುಗನು ಅದನ್ನು ವ್ಯಾಸನ ಕಾಲಕ್ಕೆ ಒಯ್ಯುವ ಅವಶ್ಯಕತೆಯಿಲ್ಲ. ಪಂಪನ ಕಾಲ, ಪರಿಸರದ ಹಿನ್ನಲೆಯಲ್ಲಿ ಅದನ್ನು ನೋಡಲು ಹೊರಟಾಗ, ಪಂಪನು ಮಾಡಿಕೊಂಡಿರುವ ಕೆಲವು ಮಾರ್ಪಾಡುಗಳಿಗೂ ಅರ್ಥವಂತಿಕೆ ದಕ್ಕುವಂತಾಗುತ್ತದೆ. ವ್ಯಾಸನಲ್ಲಿ ಪಂಚವಲ್ಲಭೆಯಾದ ದ್ರೌಪದಿಯು ಪಂಪನಲ್ಲಿ ಅರ್ಜುನನ ಪತ್ನಿ ಮಾತ್ರವೇ ಆಗುವುದು ಅವನ ಕಾಲದ ಸಾಮಾಜಿಕ ಪದ್ದತಿಯ ಪರಿಕ್ರಮವೇ ಕಾರಣವಾಗುತ್ತದೆ. ಒಟ್ಟಾರೆ ಸಾಹಿತ್ಯಕೃತಿಯನ್ನು ವಾಚಕ ಅಥವಾ ಸಹೃದಯನಾದವನು ತನ್ನ ಕಾಲದ ಪರಿಮಿತಿಗೆ ಒಳಗುಮಾಡಿ ನೋಡದೆ, ಅದರಿಂದ ಬಿಡುಗಡೆಗೊಳಿಸಿ, ನೋಡೆಂದು ಹೇಳುತ್ತದೆ ಪ್ರಾಪಂಚಿಕ ಅಂತರ. ಅತ್ಯುತ್ತಮ ಕೃತಿಗಳು ತಮ್ಮ ಕಾಲದ ಭೂಮಿಕೆಯ ಮೇಲೆ ನಿಂತುಕೊಂಡು, ವರ್ತಮಾನದ ಸಾರ - ಸಾರಾಯವನ್ನು ಮೈಗೊಂಡು, ಭವಿಷ್ಯತ್ತಿನೆಡೆಗೆ ನೋಡುತ್ತ ಜೀವಂತಶಕ್ತಿಗಳಂತೆ ಉಳಿದುಕೊಳ್ಳುತ್ತವೆ.

### ಮಾನಸಿಕ ದೂರ ಕಳೆದುಹೋಗುವ ಸಂದರ್ಭಗಳು:

ಎಡ್ವರ್ಡ್ ಬುಲ್ಲೋ ಮಾನಸಿಕ ದೂರದ ಹಾನಿಯನ್ನು ಕುರಿತು ಎರಡು ವಿಧಗಳನ್ನು ಹೇಳುತ್ತಾನೆ. ಸಂಸ್ಕೃತ ಕಾವ್ಯ ಮೀಮಾಂಸೆಯಲ್ಲಿ ರಸತತ್ತ್ವಕ್ಕೆ ಸಂಬಂಧಿಸಿದುತೆ, ರಸವಿಘ್ನಗಳನ್ನು ಲಾಕ್ಷಣಿಕರು ವಿವರಿಸಿದ್ದಾರೆ. ಅವು ಏಳು ಪ್ರಕಾರದ ವಿಘ್ನಗಳೆಂದು ಪಟ್ಟಿ ಮಾಡಿಕೊಡುತ್ತಾರೆ. ಮಾನಸಿಕ ದೂರ ಕಳೆದುಹೋಗುವ ಕಾರಣ ಅಥವಾ ಸನ್ನಿವೇಶಗಳನ್ನು ಇನ್ನೊಂದು ಅರ್ಥದಲ್ಲಿ ರಸಾನುಭೂತಿಗೆ ಒದಗುವ ವಿಘ್ನವೆಂದೇ ಪರಿಭಾವಿಸಬಹುದಾಗಿದೆ. ಬುಲ್ಲೋ ಹೇಳುವ ಎರಡು ವಿಧಗಳು ಇಂತಿವೆ:



Scanned with CamScanner

೧. ಅನತಿದೂರ (Under distance)

೨. ಅತಿದೂರ (Over distance)

೧. ಸಾಹಿತ್ಯಿಕ ಕೃತಿ ಅಥವಾ ಕಲಾಕೃತಿಯು ಪ್ರಚೋದಿಸುವ ಅನುಭವದೊಂದಿಗೆ ತೀರ ಹತ್ತಿರವಾಗಿ ನಿಲ್ಲುವುದರಿಂದ ಒದಗುವ ದೂರಭಂಗವನ್ನೇ ಅನತಿದೂರ ಎಂದು (Under distance) ಕರೆಯಲಾಗುತ್ತದೆ. ಇಲ್ಲಿ "ತೀರಾ ಹತ್ತಿರ"ವೆಂದರೆ, ಕೃತಿಯ ವಸ್ತು ಸಂಗತಿಗಳಲ್ಲಿ ನಮ್ಮ ಲೌಕಿಕ ಅಪೇಕ್ಷೆಗಳಾದ ಇಷ್ಟಾನಿಷ್ಟಗಳನ್ನು, ಲಾಭ-ಹಾನಿಗಳನ್ನೂ ಹುಡುಕುವುದು. ಈ ವಿಚಾರವನ್ನು ಒಂದು ಉದಾಹರಣೆಯಿಂದ ಸ್ಪಷ್ಟ ಮಾಡಿಕೊಳ್ಳಬಹುದು. ಸಾಹಿತ್ಯ ಕೃತಿಯಲ್ಲಿ ವರ್ಣಿತವಾಗಿರುವ ಕಾಡಿನ ವರ್ಣನೆಯನ್ನು ಓದಿದಾಗ ಅದು ನಮಗೆ ರಮ್ಯವೆನಿಸುತ್ತದೆ. ಕಾಡನ್ನು ಕಣ್ಣಾರೆ ಕಾಣುವ ಹಂಬಲವೂ ಹೃದಯದಲ್ಲಿ ಮೂಡಬಹುದು. ಕುವೆಂಪು ಅವರ ನಿಸರ್ಗ ಪದ್ಯಗಳನ್ನು ಓದಿ ಮಲೆನಾಡು ನೋಡಲೆಂದು ನಾವು ಪಯಣ ಕೈಗೊಳ್ಳಲೂಬಹುದು. ಕಾಡಿನ ಸಾನ್ನಿಧ್ಯದಲ್ಲಿ ಹೋದಾಗ, ನಮಗೆ ಭಯಂಕರವಾದ, ದಟ್ಟ, ನಭದೆತ್ತರಕ್ಕೆ ಬೆಳೆದಿರುವ ಗಿಡ-ಮರಗಳಿಂದ ಕೂಡಿದ ಅದು ಅತ್ಯಂತ ಭವ್ಯವೂ, ರುದ್ರರಮಣೀಯವೂ ಆಗಿ ಕಾಣುತ್ತದೆ. "ಆಹಾ!! ಎಂಥ ಕಾಡಿದು!" ಎಂದು ನಾವು ಉದ್ಗಾರವೂ ಹೊರಡಿಸುತ್ತೇವೆ. ಎತ್ತರವಾದ ಗಿಡವೊಂದನ್ನು ಏರಿ, ಅರಣ್ಯದಲ್ಲಿ ಓಡಾಡುತ್ತಿರುವ ಪ್ರಾಣಿ ಸಂಕುಲವನ್ನೂ ನೋಡಬಹುದು. ಎಲ್ಲಿಯವರೆಗೆ ನಾವು ಸುರಕ್ಷಿತರಾಗಿದ್ದೇವೆಂಬ ಭಾವನೆ ಇರುತ್ತದೆಯೋ ಅಲ್ಲಿಯವರೆಗೆ. ಹರಿವ ಹೆಬ್ಬಾವು ಆಗಿರಬಹುದು. ಗರ್ಜಿಸುವ ಸಿಂಹ-ಹುಲಿಗಳಾಗಿರಬಹುದು, ಕಪ್ಪನೆಯ ಕರಡಿಗಳಾಗಿರಬಹುದು, ಮತ್ತೆ ಇನ್ನೇನೇನೋ ಆಗಿರಬಹುದು-ಅವೆಲ್ಲ ನಮಗೆ ವಿಸ್ಮಯ ಮತ್ತು ಆನಂದವನ್ನೇ ಉಂಟುಮಾಡುತ್ತವೆ. ನಾವು ಏರಿದ ಮರದ ಮೇಲೆಯೇ ಒಂದು ಹೆಬ್ಬಾವು ಕಾಣಿಸಿತೆಂದು ಭಾವಿಸಿಕೊಳ್ಳೋಣ. ಆಗ ಮನಗೆ ದೂರಭಂಗವು ಒದಗಿ, ಅರಣ್ಯದಲ್ಲಿನ ವಸ್ತುಗಳೊಂದಿಗೆ ನಮ್ಮ ಅತ್ಯಂತ ಹತ್ತಿರದ ಸಂಬಂಧವು ಸ್ಥಾಪಿತಗೊಳ್ಳುತ್ತದೆ. "ಗಿಡದ ಮೇಲಿನ ಹೆಬ್ಬಾವು ನನಗೆ ಕಚ್ಚಿದರೆ, ನಾನು ಸತ್ತು ಬಿಡುತ್ತೇನೆ" ಎಂಬ ಭಯವು ನಮ್ಮನ್ನು ಕಲಾಭಾವದಿಂದ ದೂರ ಸರಿಸಿ, ಲೌಕಿಕ ಭಾವಕ್ಕೆ ಬರುವಂತೆ ಮಾಡುತ್ತದೆ. ಹೀಗಾಗಿ ಪ್ರಾಣಕ್ಕೆ ತೊಂದರೆಯನ್ನುಂಟು ಮಾಡುವ ಹೆಬ್ಬಾವಿನ ಸೌಂದರ್ಯವು ಈಗ ಸವಿಯುದಕ್ಕೆ ಮನಸ್ಸು ಖಂಡಿತಾ ಒಪ್ಪಲಾರದು.

ಕವಿಯು ತನ್ನ ಕಾವ್ಯಗಳ ಮೂಲಕ ಕೆಲವೊಮ್ಮೆ ಜಾತಿ-ವರ್ಗ-ವರ್ಣಗಳಂತಹ ವಸ್ತುಗಳನ್ನು ಆಯ್ಕೆ ಮಾಡಿಕೊಂಡು ಅಭಿವ್ಯಕ್ತಿಸುತ್ತಾನೆ. ಕಾವ್ಯದ ಅನುಭವವು ಒಂದು ಸಾರ್ವತ್ರಿಕವಾದ ವಸ್ತು ವಿಶೇಷವೆಂದು ಎಲ್ಲಿಯವರೆಗೆ ಸಹೃದಯರು ಭಾವಿಸುತ್ತಾರೋ, ಅಲ್ಲಿಯವರೆಗೆ ಆ ಕೃತಿಯು ಅವರಿಗೆ ಆನಂದವನ್ನೂ, ರಸಾನುಭೂತಿಯನ್ನೂ ನೀಡುತ್ತದೆ. ಇದಕ್ಕೆ ಹೊರತಾಗಿ, ಅಲ್ಲಿನ ಜಾತಿ-ವರ್ಗ-ವರ್ಣಗಳನ್ನು ತಮ್ಮ ವೈಯಕ್ತಿಕ ಬದುಕಿನ ಸನ್ನಿವೇಶಗಳೊಂದಿಗೆ ತಳಕು ಹಾಕಿಕೊಂಡಾಗ, ಅವರು ವಸ್ತುವಿನ ತೀರ ಹತ್ತಿರಕ್ಕೆ ಹೋಗಿ ದೂರಭಂಗಕ್ಕೆ ಒಳಗಾಗುತ್ತಾರೆ. ಹೀಗಾಗಿ ಸಹೃದಯರ ಮನಸ್ಸುಗಳು ಕವಿಯ ಕೃತಿಗಳಲ್ಲಿ ಜಾತಿಯ

Scanned with CamScanner

ನಿಂದನೆಯನ್ನೂ ಕಾಣಬಹುದು. ಇಂತಹ ಭಾವಗಳು ಮನದಲ್ಲಿ ಮೂಡಿನಿಂತಾಗ ಕಾವ್ಯವು ಅವರಿಗೆ ಯಾವುದೇ ತೆರನಾದ ಹರುಷವನ್ನು ಕೊಡಲಾರದು.

೨. ತೀರಾ ದೂರ ನಿಲ್ಲುವ ಸಂದರ್ಭದಲ್ಲಿ ಸಹೃದಯರು ಕಲಾಕೃತಿಗಳೊಡನೆ ಇರುವ ತಮ್ಮ ಸಂಬಂಧವನ್ನು ಪೂರ್ಣವಾಗಿ ಕಡಿದುಕೊಂಡಂತೆ ಇರುತ್ತಾರೆ. ಅವಕ್ಕೂ-ನಮಗೂ ಯಾವುದೇ ಸಂಬಂಧವು ಇಲ್ಲವೇನೋ-ಎನ್ನುವಂತಹ ತಟಸ್ಥತೆಗೆ ಅವರು ಒಳಗಾಗಿ ಬಿಡುತ್ತಾರೆ. ಕೆಲವು ಕವಿಗಳು ತಮ್ಮ ಕೃತಿಗಳ ಮೂಲಕ ಅತ್ಯಂತ ಆದರ್ಶವಾದ ವಸ್ತುಗಳನ್ನು ತಮ್ಮ ಸಹೃದಯರಿಗೆ ಕೊಡುವುದಕ್ಕೆ ಬಯಸುತ್ತಾರೆ. ಅಥವಾ ತಮ್ಮದೇ ಆದ ವೈಯಕ್ತಿಕ ವಿವರಗಳನ್ನು ಹಸಿಹಸಿಯಾಗಿ ಕಾವ್ಯದ ಮುಖಾಂತರ ಕೊಟ್ಟುಬಿಡುತ್ತಾರೆ. ಇಂತಹ ಕೃತಿಗಳ ಸಂದರ್ಭದಲ್ಲಿ ವಾಚಕರು ಅಲ್ಲಿನ ವಸ್ತುವಿನಿಂದ ಬಹುದೂರ ನಿಂತುಕೊಂಡು ಬಿಡುತ್ತಾರೆ. ಯಾವುದು ಭುವಿಯ ಬದುಕಿನಲ್ಲಿದ್ದು ಸಾಧಿಸುವುದಕ್ಕೆ ಸಾಧ್ಯವೇ ಇಲ್ಲವೋ, ಅಂತಹ ಆದರ್ಶವೊಂದರ ವರ್ಣನೆಯು ಸಹೃದಯರು ಏತಕ್ಕೆ ಓದಿ ಆನಂದ ಪಡುತ್ತಾರೆ? ಅದು ಕೆಲವರಿಗೆ ಮಾತ್ರ ಸಾಧ್ಯವಾಗುವ ಆದರ್ಶ. ಅಂತಹ ಆದರ್ಶಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ ವೆಂದು ವಾಚಕರು ಭಾವಿಸಿಕೊಂಡು ಬಿಟ್ಟಿರುತ್ತಾರೆ. ಕೆಲವೊಮ್ಮೆ "ಕವಿಯ ವೈಯಕ್ತಿಕ ವಿಚಾರಗಳು ಓದಿ ನಮಗೇನು ಆಗಬೇಕಾಗಿದೆ?" ಎಂಬಂತಹ ಉದಾಸೀನ ಭಾವಕ್ಕೂ ಅವರು ಒಳಗಾಗಿಬಿಡುತ್ತಾರೆ. ಆದುದರಿಂದ ಕವಿಯು ತನ್ನ ಕೃತಿಯ ಮೂಲಕ ಏನೇ ಹೇಳಲಿ, ಅದನ್ನು ಕಲಾತ್ಮಕವಾಗಿ ಕೊಡಬೇಕು. ಓದುಗರು ಯಾವುದೇ ರೀತಿಯ ದೂರಭಂಗಕ್ಕೆ ಒಳಗಾಗದಂತೆ ಎಚ್ಚರಿಕೆ ವಹಿಸಿ, ಕೃತಿಯ ವಸ್ತುವಿನ ಅಭಿವ್ಯಕ್ತಿಗೆ ತೊಡಗಬೇಕು.

ಎಡ್ವರ್ಡ್ ಬುಲ್ಲೋ ಒಂದೆಡೆಯಲ್ಲಿ ಉಭಯ ಪ್ರಕಾರದ ದೂರ ಭಂಗಕ್ಕೆ ಕಾರಣಗಳನ್ನು ಹೀಗೆ ಹೇಳುತ್ತಾನೆ: "The consequence of a loss of distance through one or other cause is familiar: The verdict in the case of under distance is that work is 'crudely naturalistic, harrowing repulsive in its realism. An excess of distance produces the impression of improbability, artificiality emptiness or obsurdity'' ಅಂದರೆ "ಒಂದು ಕೃತಿ ಕಡಿಮೆ ದೂರದ ಕಡೆಗೆ ಸರಿಯುವುದಕ್ಕೆ ಅಸಂಸ್ಕೃತ ವಾಸ್ತವತೆಯ ಗೀಳಿನಿಂದ ಉಂಟಾಗುವ ಭಾವೋದ್ರೇಕದ ಅಭಿವ್ಯಕ್ತಿ ಕಾರಣವಾಗುತ್ತದೆ. ಇಲ್ಲಿ ಭಾವೋದ್ರೇಕದ ಹುಚ್ಚು ಹೊಳೆ 'turning loose of emotion' ಆಗುತ್ತದೆ. ಕಾವ್ಯ, ಭಾವವಿಮೋಚನೆ ಅಂದರೆ 'escape from emotion' ಆಗುವುದಿಲ್ಲ. ಹೀಗಾಗಿ ಅತಿ ದೂರವೆಂಬ ಭಂಗವು ತಲೆದೂರುತ್ತದೆ" (ಪಾ.ಕಾ.ಚಿಂ-ಪು.೪೫೯).

ಎಡ್ವರ್ಡ್ ಬುಲ್ಲೋ ದೂರಭಂಗಗಳನ್ನು ಬೆಂಕಿ ಕಾಯಿಸಿಕೊಳ್ಳುವ ಕ್ರಿಯೆಯಿಂದ ಇನ್ನಷ್ಟು ಸ್ಪಷ್ಟವಾಗಿ ಮನಗಾಣಿಸಿಕೊಡುತ್ತಾನೆ. ಚಳಿಗಾಲದ ಸಂದರ್ಭದಲ್ಲಿ ಬೆಂಕಿ ಕಾಯಿಸಿಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿಗೂ ಅಪ್ಯಾಯಮಾನವಾದ ಕೆಲಸವಾಗಿರುತ್ತದೆ. ಆದರೆ ಬೆಂಕಿಗೆ ಎಷ್ಟು

ಅಂತರದಲ್ಲಿ ಕುಳಿತು ಅದನ್ನು ಕಾಯಿಸಿಕೊಂಡರೆ, ಹಿತಕರವಾದ ಶಾಖವು ಮೈಗೆ ತಗಲುತ್ತದೆಂಬುದರ ಬಗೆಗೆ ಕಾಯಿಸಿಕೊಳ್ಳುವವನು ಆಲೋಚಿಸಬೇಕಾಗುತ್ತದೆ. ಬೆಂಕಿಗೆ ಹೆಚ್ಚು ಹತ್ತಿರ ಕುಳಿತುಕೊಂಡರೆ, ಅದರ ಅತಿಯಾದ ಶಾಖವು ತಗುಲುತ್ತದೆ. ಅತಿಯಾದ ಶಾಖವು ಹತ್ತಿ ಮೈಸುಡುತ್ತದೆಯೆಂದು ಭಾವಿಸಿ. ಅದರಿಂದ ಅತಿದೂರ ಹೋಗಿ ಕುಳಿತರೆ, ಬೆಂಕಿಯ ಬಿಸಿಯು ಮೈಗೆ ತಾಕುವುದಿಲ್ಲ. ಬೆಂಕಿಯಿಂದ ಅತೀ ದೂರವು ಅಲ್ಲದ, ಅತಿ ಸಮೀಪವೂ ಅಲ್ಲದ ಒಂದು ನಿಶ್ಚಿತ ದೂರದಲ್ಲಿ ಕುಳಿತು ಕಾಯಿಸಿಕೊಂಡಾಗ ಮಾತ್ರ ಅದರ ಶಾಖವು ಸುಖಕರವಾದ ಅನುಭವ ನೀಡುತ್ತ ಚಳಿಯನ್ನು ಕಳೆದುಬಿಡುತ್ತದೆ. ಕಾವ್ಯ ಅಥವಾ ಕಲಾಕೃತಿಯ ಸಂಬಂಧದಲ್ಲಿ ಕವಿ ಅಥವಾ ಕಲಾವಿದನಾಗಲಿ, ಸಹೃದಯ ಅಥವಾ ಪ್ರೇಕ್ಷಕನಾಗಲಿ ಇದೇ ರೀತಿಯಲ್ಲಿ ವ್ಯವಹರಿಸಬೇಕಾಗುತ್ತದೆ. ಅಂದಾಗ ಬೆಂಕಿಯ ಹಿತವಾದ ಬಿಸಿಯಂತೆ ಕೃತಿಯ ರಸಾನಂದವು ಮನಕ್ಕೆ ಉಲ್ಲಾಸವನ್ನುಂಟುಮಾಡುತ್ತದೆ.

ಎಡ್ವರ್ಡ್ ಬುಲ್ಲೋನ "ಮಾನಸಿಕ ದೂರ" ತತ್ತ್ವದ ಭೂಮಿಕೆಯ ಮೇಲೆ ದೂರಭಂಗದ ಕಾರಣಗಳನ್ನು ವಿದ್ವಾಂಸರು ಹೀಗೆ ಸಂಭಾವಿಸಿದ್ದಾರೆ:

೧. ಕಲಾವಿದ ಮತ್ತು ಓದುಗರು ಉಭಯರಲ್ಲಿ ಏನಾದರೂ ದೋಷಗಳು ಇದ್ದಾಗ ದೂರಭಂಗವು ಸಂಘಟಿಸುತ್ತದೆ.

೨. ಕಲಾವಿದ ಮತ್ತು ಪ್ರೇಕ್ಷಕರ ಸಾಮರ್ಥ್ಯವು ಅದಕ್ಕೆ ಪೂರಕವಾಗಿರದಿದ್ದ ಪಕ್ಷದಲ್ಲಿ ದೂರಭಂಗವು ಉಂಟಾಗುತ್ತದೆ.

೩. ಕವಿ-ಕಲಾವಿದನು ಅಭಿವ್ಯಕ್ತಿಸುವ ಯಾವುದೋ ಅನುಭವವು ತೀರಾ ವೈಯಕ್ತಿಕ ವಾದಾಗ ದೂರಭಂಗವು ಎದುರಾಗುತ್ತದೆ.

೪. ಕವಿಯು ತನ್ನಿಂದ ಆಚೆಗಿರುವ ಸಿದ್ಧ-ಪ್ರಸಿದ್ಧವಾದ ವಸ್ತುವನ್ನು ಆರಿಸಿಕೊಂಡು ಕೃತಿಗಳನ್ನು ರಚಿಸಿದಾಗ ಈ ದೂರಭಂಗವು ಕಾಣಿಸಿಕೊಳ್ಳುತ್ತದೆ.

೫. ದೂರಭಂಗದ ಇನ್ನೊಂದು ಕಾಣವೆಂದರೆ ಕವಿ-ಕಲಾವಿದರು ಸಮಕಾಲೀನವಾದ ಕೆಲವು ಜ್ವಲಂತ ಸಂಗತಿಗಳನ್ನು, ಮುಖ್ಯವಾಗಿ ಅದುವರೆಗೂ ಗೃಹಿತವಾದ ನೈತಿಕ ನಿಲುವುಗಳನ್ನೂ, ಪ್ರತಿಷ್ಠಿತವಾದ ಸಾಮಾಜಿಕ ಸಂಸ್ಥೆಯ ಮೌಲ್ಯಗಳನ್ನೂ ಪ್ರಶ್ನಿಸುವ ಉದ್ದೇಶದ ವಸ್ತುಗಳನ್ನು ಸಾಕಷ್ಟು "ದೂರಕ್ಕೆ ಒಳಗುಪಡಿಸದೆ ಇದ್ದಾಗ" (ಪಾ.ಕಾ.ಚಿಂ-ಪು.೧೯೪) ಎಂದು ಎಡ್ವರ್ಡ್ ಬುಲ್ಲೋ ಹೇಳುತ್ತಾನೆ.

೬. ಕೃತಿಯಲ್ಲಿನ ವಸ್ತುವನ್ನು ಚಿತ್ರಿಸುವಾಗ ಅದನ್ನು "ಅಸಂಭಾವ್ಯ"ವೆನ್ನುವಂತೆ ಚಿತ್ರಿಸುವುದು.

೭. ಕೃತಿಕಾರನು ಚಿತ್ರಿಸುವ ಸಂಗತಿಯು ತೀರಾ ಜಿಗುಪ್ಸೆ ಹುಟ್ಟಿಸುವಂತಿದ್ದರೆ.



Scanned with CamScanner

೮. ಶೃಂಗಾರದ ಚಿತ್ರಣವು ತೀರಾ ವಾಚ್ಯವಾದಾಗ, ಅದನ್ನು ಕೊಡುವಾಗ ಕವಿ-ಕಲಾವಿದರು "ಮಾನಸಿಕ ದೂರ"ಕ್ಕೆ ಒಳಪಡಿಸಿಕೊಟ್ಟರಷ್ಟೇ ಸಾಲದು, ಓದುಗ–ಪ್ರೇಕ್ಷಕರೂ ಅದನ್ನು "ಮಾನಸಿಕ ದೂರ"ದಲ್ಲಿರಿಸಿಕೊಂಡು ನೋಡಲು ಸಮರ್ಥರಾಗಿಬೇಕು. ಒಂದು ಲೈಂಗಿಕ ಸಮಸ್ಯೆಯನ್ನು ಕಾವ್ಯವಾಗಿಯೋ, ಕಾದಂಬರಿಯನ್ನಾಗಿಯೋ ಬಿಡಿಸಿ ತೋರಿಸಿದಾಗ, ಅದರಲ್ಲಿ ಅಂಥ ಅಶ್ಲೀಲತೆಯೇನೋ ಬಹು ವೇಳೆ ಇರುವುದಿಲ್ಲ. ಆದರೂ ಓದುಗರ ಅಸಾಮರ್ಥ್ಯತೆಯಿಂದ ಅಥವಾ ಅದನ್ನು ಆಸ್ವಾದಿಸಲು ತಕ್ಕ ದೂರದಲ್ಲಿ ನಿಲ್ಲಿಸಿಕೊಳ್ಳಲಾರದ ಕಾರಣದಿಂದ, ವಿಲಕ್ಷಣವಾದ ಪ್ರತಿಕ್ರಿಯೆಗಳು ಕಾಣಿಸಿಕೊಳ್ಳುವುದು ತೀರಾ ಸ್ವಾಭಾವಿಕ" (ಪಾ.ಕಾ.ಚಿಂ-ಪು.೧೯೭).

೯. "ಒಟ್ಟಿನಲ್ಲಿ ರಸಾನುಭವ ಅಥವಾ ಕಲಾ ಅನುಭವ ಸರಳವಾದದ್ದೂ ಅಲ್ಲ, ಸುಲಭವಾದದ್ದೂ ಅಲ್ಲ. ಅದು ಕೆಲವು ಗೊತ್ತುಪಾಡು (conditions) ಮತ್ತು ನಿಲುವುಗಳ ಒಂದು ಸ್ಥಿತಿಯಲ್ಲಿ ಅನುಭವಕ್ಕೆ ಬರುವಂಥದ್ದು. ಒಂದು ಅನುಭವ ಕಲಾಕೃತಿಯಾಗುವಾಗ ಮತ್ತು ಒಂದು ಕಲಾಕೃತಿ ಆಸ್ವಾದವಾಗುವಾಗ ಕವಿ-ಕಲಾವಿದನಿಗೆ ಹಾಗೂ ಓದುಗ ಅಥವಾ ಪ್ರೇಕ್ಷಕನಿಗೆ ಅತ್ಯಂತ ಅಗತ್ಯವಾದದ್ದು ತಮ್ಮನ್ನು ಆ ವಸ್ತು ಮತ್ತು ಅದು ಪ್ರಚೋದಿಸುವ ಭಾವನೆಗಳಿಗೆ ಒಂದು ನಿಯತವಾದ ದೂರದಲಿ ನಿಲ್ಲಿಸಿಕೊಳ್ಳುವ ಸಾಮರ್ಥ್ಯ. ಹಾಗೆ ತಮ್ಮನ್ನು ನಿಲ್ಲಿಸಿಕೊಳ್ಳುವುದರಲ್ಲಿನ ಅಸಾಮರ್ಥ್ಯದಿಂದ ಉಂಟಾಗುವ ಏರು ಪೇರುಗಳು "ದೂರಭಂಗ"ಕ್ಕೆ ಕಾರಣವಾಗಿ ಕಲೆಯ ಉದ್ದೇಶ ವಿಫಲವಾಗುತ್ತದೆ" ಎನ್ನುತ್ತಾರೆ ಜಿ.ಎಸ್.ಶಿವರುದ್ರಪ್ಪನವರು (ಪಾ.ಕಾ.ಚಿಂ-ಪು.೨೦೦).

ಖ್ಯಾತ ತತ್ತ್ವಜ್ಞಾನಿ ಹೆಗಲ್‌ನು ಮಾನಸಿಕ ದೂರವನ್ನು "ಮನಸ್ಸಿನ ನಿಸ್ಸಂಗ ಪರಿಭಾವಕತ್ವದ ಸ್ಥಿತಿ" (Disintrested contemplation) ಎಂದು ಗುರುತಿಸುತ್ತಾನೆ. ಮನಸ್ಸು ನಿಸಂಗತ್ವದಲ್ಲಿ ನಿಂತಾಗ ಮಾತ್ರ ಅದಕ್ಕೆ ಸೌಂದರ್ಯದ ಅನುಭವ ಉಂಟಾಗುತ್ತದೆ.

ಸಂಸ್ಕೃತ ಕಾವ್ಯಮೀಮಾಂಸೆಯಲ್ಲಿ "ಸಾಧರಣೀಕರಣ"ವು ಒಂದು ಮಹತ್ವದ ಪರಿಕಲ್ಪನೆಯಾಗಿರುವಂತೆ, ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ "ಮಾನಸಿಕ ದೂರ" ಸಿದ್ಧಾಂತವು ಮಹತ್ವದ ಪರಿಕಲ್ಪನೆಯಾಗಿದೆಯನ್ನಬೇಕು.

❑

Scanned with CamScanner